*ನೇ.ಗೋ.ಭ, ಕುಕ್ಕೆ ಸುಬ್ರಮಣ್ಯ*
*ತಮ್ಮ ಊರುಗೋಲನ್ನು ಮೊಮ್ಮಗನಿಗಿತ್ತು ತಾವು ಸರಾಗವಾಗಿ ನಡೆದು ಬರುತ್ತಿರುವರಲ್ಲಾ ಇಲ್ಲೊಬ್ಬ ತಾತ...!*



ಶಾಲೆಯ ಬ್ಯಾಗ್ ಹೊತ್ತು ಗೂನಾದ ಬೆನ್ನಿಗೇ ಊರುಗೋಲಿನ ಅವಶ್ಯಕತೆ ಹೆಚ್ಚಂತೆ!

*ಮಲ್ಲಿಕಾರ್ಜುನ ಹ. ಬಗಲಿ*
*ಗಂಡನ ಮನೆಗೆ ಕಾಲಿಡುವಾಗ ಅಕ್ಕಿ ತುಂಬಿದ ಸೇರನ್ನು ಕಾಲಿನಿಂದ ಒದೆಯುವ ಬದಲು ಕೈಯಿಂದ ನೂಕುವ ಕಾಲ ಯಾವಾಗ ಬರುತ್ತದೆ?*
ಶಾಸ್ತ್ರದ ರೀತಿ ಬದಲಾಗಿ, ಹೆಣ್ಣು ಶೀರ್ಷಾಸನ ಹಾಕಿಕೊಂಡು ಮನೆಯೊಳಗೆ ಬರಬೇಕು ಎಂದಾದಾಗ!

*ಎಸ್.ಜಿ. ಕರನಂದಿ, ಹುನಗುಂದ*
*ವಾಲ್ಮೀಕಿ ರಾಮಾಯಣಕ್ಕೂ, ರೆಸಾರ್ಟ್ ರಾಮಾಯಣಕ್ಕೂ ಏನು ವ್ಯತ್ಯಾಸ?*
ಅಲ್ಲಿ ಸಿಂಗಲ್ ಕಿಡ್‌ನ್ಯಾಪ್, ಇಲ್ಲಿ ಹೋಲ್‌ಸೇಲ್ ಕಿಡ್‌ನ್ಯಾಪ್!

*ಅಮರಯ್ಯ ಪತ್ರಿಮಠ, ಸುರಪುರ*
*'ತೂಕದ ಮಾತು' ಎಂದರೆ?*
'ಬೊಜ್ಜು ಕರಗಿಸಿ' ಎಂಬ ಜಾಹಿರಾತು!

*ಎಸ್. ನರೇಂದ್ರನಾಯಕ್, ಗಂಗೊಳ್ಳಿ*
*ಸರ್ಕಾರಿ ನೌಕರರಿಗೆ ಸಂಬಳ ಕೊಡದೆ ಲಂಚಕ್ಕೆ ಅವಕಾಶ ಕೊಟ್ಟರೆ ಹೇಗೆ ಸರ್?*




ಸರಿಯಿಲ್ಲ ಬಿಡಿ; ಬಚ್ಚಿಟ್ಟದ್ದರ ಸೊಬಗು ಬಿಚ್ಚಿಟ್ಟದ್ದಕ್ಕೆ ಇರುವುದಿಲ್ಲ!

*ಗೀತಾ ಬರ್ಲ, ಬೆಂಗಳೂರು*
*ಕಷ್ಟಪಟ್ಟು ಧನಿಕರಾದವರು ತಾವು ಸವೆಸಿದ ದಾರಿ ಮರೆತುಬಿಡುತ್ತಾರಲ್ಲಾ ಸಾರ್?*
ಸಿರಿಯ ತೆರೆಯ ಮಂಜಿನಲ್ಲಿ ಮೊದಲಿನದಲ್ಲೇ ಮಬ್ಬಾಗುತ್ತದಂತೆ!

*ಬಿ.ಎಂ.ಪರಶಿವಮೂರ್ತಿ, ಬೆಂಗಳೂರು*
*ಬರುವುದು Import, ಹೋಗುವುದು export; ಇರುವುದು?*
*ಸರಿಯಾಗಿದ್ದರೆ ಜೀವನನೌಕೆಗೆ port, ಇಲ್ಲವಾದರೆ* crime report*!*

*ಎಸ್.ಜಿ.ರಾಜಶೇಖರರೆಡ್ಡಿ, ಗೌರಿಬಿದನೂರು*
*ನ್ಯಾಯವಾದಿಗಳು ಅನ್ಯಾಯದ ಪರ ವಾದಿಸಿದರೆ ಅನ್ಯಾಯವಾದಿಗಳಾಗುತ್ತಾರೆಯೇ?*
ಕ್ರಿಮಿನಲ್-ಲಾಯರ್ ಆಗುತ್ತಾರೆ!

*ರಮೇಶ್, ಹನುಮನಾಳು*
*ಸಹನೆ, ಸಂವೇದನೆ ಎಂದರೇನು ಮಿಸ್ಟರ್?*
ಟ್ರಾಫಿಕ್ ಜ್ಯಾಂನಲ್ಲಿ ಕಳೆದುಕೊಳ್ಳುವಂತಹದ್ದು ಸಹನೆ, ನಂತರದ್ದೆಲ್ಲಾ ಸಂವೇದನೆ!

*ಕೆ.ವಿ. ಶಿವಕುಮಾರ್, ಕಾಳೀಹುಂಡಿ*
*ನನ್ನ ಹೆಂಡತಿ ಪಿಪ್ಪಾಟಿಸಂ ಕಲಿಯುತ್ತಿದ್ದಾಳಲ್ಲಾ...?*
ಪತ್ನಿಯ ಎಲ್ಲಾ ಪ್ರಶ್ನೆಗಳಿಗೂ ಕಣ್ಣು ಮುಚ್ಚಿ, ತಲೆತಗ್ಗಿಸಿ, ಉತ್ತರಕೊಡುವ ನಿಮಗೆ ಅದರಿಂದ ತೊಂದರೆ ಇಲ್ಲ ಬಿಡಿ.

*ಎನ್.ವಸಂತಾ ಆನಂದ್, ಕತ್ತರಗುಪ್ಪ*
*ನನ್ನ ಗೆಳತಿಯೊಬ್ಬಳು ಒಲಿದರೆ ಬೆಣ್ಣೆ, ಮುನಿದರೆ ದೊಣ್ಣೆ; ಏಕೆ ಹೀಗೆ?*
ಎರಡು ವೇಷಗಳೂ ಸರಿಯೇ ? ಕೊಲೆಗೊಂದು, ಕೊಲೆಸ್ಟ್ರಾಲ್‌ಗೊಂದು!

*ಎಂ.ಎಸ್.ಧರ್ಮೇಂದ್ರ, ಜಿಟಿಆರ್‌ಇ ಕ್ಯಾಂಪಸ್*
*ಹೆಂಡತಿಯ ಮುಂದೆಯೇ ಗರ್ಲ್‌ಫ್ರೆಂಡ್ ಜೊತೆ ಓಡಾಡುವವನನ್ನು ಏನೆನ್ನಬಹುದು?*
ಕುರುಡಿಯ ಗಂಡ!

*ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ*
*ಇಲ್ಲೊಬ್ಬಳು ಶರೀರದ ಎಲ್ಲಾ ಅಂಗಗಳ ಅರಿವು ಇರಬೇಕು ಎಂದಳಲ್ಲಾ...?*
ತಪ್ಪು ತಿಳಿಯಬೇಡಿ; ಆಕೆ ಬಯಾಲಜಿ ಟೀಚರ್.

*ಎಂ.ಬಿ.ಖೋದಾನಪುರ, ಸವದತ್ತಿ*
*ಮನೆಮುರುಕರಿಗೆ ದೇವರೇನು ಮಾಡುತ್ತಾನೆ?*
ಡಿಮಾಲಿಷನ್ ಕಂಟ್ರಾಕ್ಟ್ ಕೊಡಿಸುತ್ತಾನೆ!

*ಗಾಯತ್ರಿ, ರಾಜಾಜಿನಗರ*
*ಮುತ್ತಜ್ಜಿಯಾದರೂ ಅಲಂಕಾರ ಮಾತ್ರ ಆಂಟಿಯಂತಿರುತ್ತದಲ್ಲಾ...?*
ಗುಡ್; ಆ ವಯಸಿನಲ್ಲೂ ಇರುವ ಅವರ ಲವಲವಿಕೆಗೆ ಹ್ಯಾಟ್ಸ್ ಆಫ್!

## ಬಹುಮಾನಿತ ಪ್ರಶ್ನೆ

*ಮುರಲೀಧರ ಕುಲಕರ್ಣಿ, ಬೀದರ್*
*ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆ ಜನಬೆಂಬಲ ಏಕೆ ದೊರೆಯುವುದಿಲ್ಲ?*
ಅನಾಚಾರದ ಇಳಿಜಾರೇ ಅಭ್ಯಾಸವಾದವರಿಗೆ ಆಚಾರದ ದಿಣ್ಣೆ ಏರಲು ತ್ರಾಸವಂತೆ!

*ಡಿ.ಕೆ.ರಾಜ, ಗದಗ*
*ಸುಂದರ ಹುಡುಗಿಯನ್ನು ನೋಡಲು ಸರ್ಕಾರ ತೆರಿಗೆ ವಿಧಿಸಿದರೆ?*
ಕದ್ದು ನೋಡುವವರು ಹೆಚ್ಚಾಗುತ್ತಿದ್ದರು.

*ಟಿ.ಪ್ರಕಾಶ, ಕಮ್ಮತ್ತಹಳ್ಳಿ*
*ಉಪಚುನಾವಣೆಗಳಲ್ಲಿ ಮತದಾನದ ಪ್ರಮಾಣ ಹೆಚ್ಚಲು ಮತದಾರರ ಆಸಕ್ತಿ ಕಾರಣವೋ ಅಥವಾ ಹಣದ ಪ್ರಭಾವವೋ?*
ಹಣಬಲವೇ; ನಮ್ಮಲ್ಲಿ ಈಗ ಇರುವುದು ಮತದಾನವಲ್ಲ, ಮತಮಾರಾಟ!

*ಕೆ.ಮೈಥಿಲಿಕೃಷ್ಣ, ಬೆಂಗಳೂರು*
*ರಾಜಕೀಯ ಮತ್ತು ಧರ್ಮ ಯಾವ ಸಂಧಿ?*
ಸ-ವರ್ಣ ದೀರ್ಘ ಸಂಧಿ!

*ಕೆ. ಹೊನ್ನಪ್ಪ, ಕ್ಯಾತ್ಸಂದ್ರ*
*ಮನುಷ್ಯ ಹುಟ್ಟಿದ ಮೇಲೆ ಪಾಸ್‌ಪೋರ್ಟ್ ರೆಡಿ ಇರುತ್ತದೆ, ವೀಸಾ ಡೇಟ್ ಗೊತ್ತಾಗಿಬಿಟ್ರೆ?*
ಬರ್ತ್ ಸರ್ಟಿಫಿಕೇಟ್ ಜೊತೆಜೊತೆಗೇ ಡೆತ್ ಸರ್ಟಿಫಿಕೇಟ್ ಉಚಿತ!

*ಜಾಕೋಬ್ ಡಿಸೋಜ, ಕುರುವಳ್ಳಿ*
*ಸತ್ಯ ಹರಿಶ್ಚಂದ್ರನಂತಹವರೊಬ್ಬರು ರಾಜಕೀಯದಲ್ಲಿದ್ದಿದ್ದರೆ?*
ನೂರಾರು ನಕ್ಷತ್ರಿಕರು 'ಹುಟ್ಟಿಲ್ಲ' ಅನ್ನಿಸಿಬಿಡುತ್ತಿದ್ದರು!

*ಮಹಾವೀರ ಕಾಸರ, ಶಿವಮೊಗ್ಗ*
*ರಾಜಕಾರಣಿಗಳು ಫಾರಿನ್‌ಗೆ ಹೋಗುವಾಗ ಅವರೊಂದಿಗೆ ಏನಿರುತ್ತದೆ? ಬರುವಾಗ ಏನಿರುತ್ತದೆ?*




ಹೋಗುವಾಗ ದುರಾಸೆ, ಬರುವಾಗ ಡ್ಯೂಟಿ ಫ್ರೀ ಹೆಂಡ.

ರಾಮ್